(ಶ್ರೀ ಕೆ. ಪ್ರಭಾಕರ್.)

ಈಗ Information Bulletin ಮತ್ತು ಗ್ರಾಮಾಭ್ಯುದಯ ಪತ್ರಿಕೆಗಳನ್ನು ನಮ್ಮ ಪ್ರೆಸ್ಸಿನಲ್ಲಿ ಮಾಡುವುದಕ್ಕಾಗುವುದಿಲ್ಲ, ಆದ್ದರಿಂದ ಇವುಗಳಿಗೆ ಬೇರೆ ಅನುಕೂಲಗಳನ್ನು ಮಾಡಿಕೊಡಬೇಕೆಂದೇನಾದರೂ ಕೇಳಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದು ಆ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದು. ಅವರು ಹೆಚ್ಚಿಗೆ ಅನುಕೂಲತೆಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಕೆ. ಪ್ರಭಾಕರ್.—ಗ್ರಾಮಾಭ್ಯುದಯ ಪತ್ರಿಕೆಯನ್ನು ಮುದ್ರಿಸುವುದಕ್ಕೆ ಬೇರೆ ಅನುಕೂಲತೆಗಳನ್ನು ಮಾಡಿಕೊಡಬೇಕೆಂದು ಕೇಳಿದ್ದಾರೆ ಅಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೇಳಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಆ ವಿಚಾರದಲ್ಲಿ ಏನು ಹೇಳಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಎ. ವಿ. ನರಸಿಂಹ ರೆಡ್ಡಿ.—ಇನ್‌ಫರ್ಮೇಷನ್ ಬುಲೆಟಿನ್ನಿನಲ್ಲಿ ಬರುವ ಸಮಾಚಾರ out of date ಆಗಿಲ್ಲವೆಂದು ಹೇಳಿದಿರಿ. ತಾವೇ ಡಿಸೆಂಬರ್ issue ಇನ್ನೂ ಹೊರಬಿದ್ದಿಲ್ಲವೆಂದು information ಹೇಳಿದ್ದೀರಿ. ಅಂದಮೇಲೆ ಅದೇ latest ಎಂದು ತಾವು ಭಾವಿಸಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲಿಯವರೆಗೆ ಮುದ್ರಣವಾಗಿದೆಯೋ ಆ ತಾರೀಖಿನವರೆಗೆ ಅದು latest information ಒಳಗೊಂಡಿರುತ್ತದೆ.

ಶ್ರೀ ಎ. ವಿ. ನರಸಿಂಹ ರೆಡ್ಡಿ.—ಈಗ ಅಲ್ಲಿ ಹೇಳಿರುವುದೆಲ್ಲವೂ ನಾಲ್ಕು ತಿಂಗಳ ಹಿಂದೆ ನಡೆದಿರುವ ಸಮಾಚಾರ. ಇದು ಸರಿಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಸರಿಪಡಿಸುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಕನ್ನಡದಲ್ಲಿ ಸಾವಿರ ಪ್ರತಿಗಳನ್ನೂ ಇಂಗ್ಲೀಷಿನಲ್ಲಿ 3,000 ಪ್ರತಿಗಳನ್ನೂ ಮುದ್ರಿಸುತ್ತಿದ್ದೀರೆಂದು ಹೇಳಿದಿರಿ. ಇಂಗ್ಲೀಷಿನಲ್ಲಿ ಹೆಚ್ಚಿಗೆ ಮುದ್ರಿಸುತ್ತಿರುವುದಕ್ಕೆ ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ್ಗೆ ಕೆಲವು ತಿಂಗಳುಗಳಿಗೆ ಹಿಂದೆ ಬರೀ ಇಂಗ್ಲೀಷಿನಲ್ಲಿ ಮಾತ್ರ ಮುದ್ರಣವಾಗುತ್ತಿತ್ತು. ಈಚೆಗೆ ಕನ್ನಡದಲ್ಲೂ ಮಾಡುವುದಕ್ಕೆ ಪ್ರಾರಂಭಿಸಿದ್ದೇವೆ. ಅದನ್ನು ಇನ್ನೂ ಜಾಸ್ತಿಮಾಡುತ್ತೇವೆ.

Sri K. S. VASAN.—Will effort be made to bring the *Mysore Informotion Bulletin* to the standard of the *Madras Information Bulletin*?

Sri A. G. RAMACHANDRA RAO.—To the best standards we will try.

Sri K. S. VASAN.—If individuals write articles, will they be accepted for publication in the *Mysore Information Bulletin*?

Sri A. G. RAMACHANDRA RAO.—Yes, if it is worth publication.

ಶ್ರೀ ಬಿ. ನಾರಾಯಣಸ್ವಾಮಿ.—ಈ ಇನ್‌ಫರ್ಮೇಷನ್ ಬುಲೆಟಿನ್ನಿನ get up ಚೆನ್ನಾಗಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರ ಅಭಿಪ್ರಾಯದಲ್ಲಿ ಚೆನ್ನಾಗಿದೆಯೆಂದು ಹೇಳಬಹುದು.

ಶ್ರೀ ಬಿ. ನಾರಾಯಣಸ್ವಾಮಿ.—ಇದನ್ನು ಮಾರಾಟಮಾಡಿದರೆ ಸರ್ಕಾರಕ್ಕೆ ಆದಾಯ ಬರುವುದಿಲ್ಲವೇ? (ಉತ್ತರವಿಲ್ಲ.)

Repair of Government School Buildings in Sira Taluk.

Q.—183. **Sri B. N. RAME GOWDA** (Sira).—Will the Government be pleased to state :—

(*a*) the number of Government School Buildings in Sira Taluk that have become (i) completely dilapidated and (ii) the number that are in dilapidated condition :

(*b*) whether any of them have been repaired so far and if so, which are they ?

A.—**Sri A. G. RAMACHANDRA RAO** (Minister for Law and Education).—

(*a*) (i) Nill
(ii) 12.

(*b*) Repairs have been effected to 4:

(1) New Type Middle School at Sira,

(2) Central Primary School at Sira.

(3) Primary Boys' School Building, Bandukunte,

(4) Primary Boys' School Building, Huligerepur,

ಶ್ರೀ ಬಿ. ಎಸ್. ರಾಮೇಗೌಡ.—ಇನ್ನೂ ರಿಪೇರಿಯಾಗಿಲ್ಲದಿರುವ 8 ಸ್ಕೂಲುಗಳು ಯಾವುವು?

ಶ್ರೀ ಎ. ಜಿ. ರಾಮಚಂದ್ರರಾವ್.—

(1) ಬುಕ್ಕಾಪಟ್ಣ (ಎರಡು ಪ್ರೈಮರಿ ಸ್ಕೂಲುಗಳು, ಒಂದು ಮಿಡ್ಲ್ ಸ್ಕೂಲು).

(2) ಜೋಗಿಹಳ್ಳಿ ಸ್ಕೂಲು ಕಟ್ಟಡ.

(3) ತಾವರೆಕೆರೆ ಸ್ಕೂಲು ಕಟ್ಟಡ.

(4) ಬರಗೂರು ಮಿಡ್ಲ್ ಸ್ಕೂಲು ಕಟ್ಟಡ.

(5) ಹಿರಗನಹಳ್ಳಿ ಸ್ಕೂಲು ಕಟ್ಟಡ.

(6) ಮೊಸರಕುಂಟೆ ಸ್ಕೂಲು ಕಟ್ಟಡ.

ಶ್ರೀ ಬಿ. ಎಸ್. ರಾಮೇಗೌಡ.—ಇವುಗಳ ರಿಪೇರಿ ಬಗ್ಗೆ ಏನು ಕಾರ್ಯಕ್ರಮ ಕೈಕೊಂಡಿದೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕವುಗಳ ವಿಷಯದಲ್ಲಿ ಕಾರ್ಯಕ್ರಮ ತೆಗೆದುಕೊಂಡಿದೆ. ನಾಲ್ಕಕ್ಕೆ ಇಲ್ಲೇ ಹೇಳಿದೆ. ಬಾಕಿಯವಲ್ಲಿ ಮೂರು ಸ್ಕೂಲುಗಳ ವಿಷಯದಲ್ಲಿ ಈಗತಾನೆ ಎಸ್ಟಿಮೇಟ್ ಬಂದಿದೆ, ಇನ್ನು ಮಿಕ್ಕವಕ್ಕೆ ಎಸ್ಟಿಮೇಟ್ ತಯಾರಾಗುತ್ತಿದೆ.

ಶ್ರೀ ಬಿ. ಎಸ್. ರಾಮೇಗೌಡ.—ಎಸ್ಟಿಮೇಟ್ ತಯಾರಾಗಿ ಎಷ್ಟು ದಿವಸವಾಯಿತು?

ಶ್ರೀ ಎ. ಜಿ. ರಾಮಚಂದ್ರರಾವ್—ತಾರೀಖು ಹೇಳಲು ನೋಟೀಸ್ ಬೇಕು.

ಶ್ರೀ ಬಿ. ಎಸ್. ರಾಮೇಗೌಡ.—ಅಂದಾಜು ತಯಾರಾಗಿ ಆಗಲೇ ಎರಡು ವರ್ಷಗಳಾಗಲಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ತಾರೀಖು ಗೊತ್ತಿಲ್ಲವೆಂದು ಆಗಲೇ ಹೇಳಿದ್ದೇನೆ.

ಶ್ರೀ ಬಿ. ಎಸ್. ರಾಮೇಗೌಡ.—ಎರಡು ವರ್ಷಗಳ ಹಿಂದೆಯೇ ಎಸ್ಟಿಮೇಟ್‌ಮಾಡಿದ್ದಾಗಿದ್ದರೂ ಇನ್ನೂ ರಿಪೇರಿಯಾಗದಿರುವುದಕ್ಕೆ ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ದುಡ್ಡಿನ ಅಭಾವ.

ಶ್ರೀ ಬಿ. ಎಸ್. ರಾಮೇಗೌಡ.—ದುಡ್ಡಿನ ಅಭಾವದಿಂದಲೇ ಅಥವಾ ಎಸ್ಟಿಮೇಟ್ ಆಗದಿರುವುದರಿಂದಲೇ?

ಶ್ರೀ ಎ. ಜಿ. ರಾಮಚಂದ್ರರಾವ್.—ದುಡ್ಡಿನ ಅಭಾವದಿಂದ.

ಶ್ರೀ ಬಿ. ಎಸ್. ರಾಮೇಗೌಡ.—ಈಗ ಈ ಕೆಲಸ ಯಾವ ಇಲಾಖೆಯಲ್ಲಿ ನಿಂತಿದೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಸ್ಟಿಮೇಟ್ ಆಗತಕ್ಕಂಥಾದ್ದು P.W.D. ಇಲಾಖೆಯಲ್ಲಿ, ಸ್ಯಾಂಕ್ಷನ್ ಆಗತಕ್ಕಂಥಾದ್ದು ವಿದ್ಯಾ ಇಲಾಖೆಯಲ್ಲಿ.

———

9 A.M.

Supply of Electricity to irrigate lands on right bank of Tungabhadra river in Bhadravati Taluk,

Q.—28. Sri B. MADHAVACHAR (Bhadravati).—Will the Government be pleased to state:—

(*a*) whether they have received representation from the agriculturists owning lands on the right bank of Tungabhadra River in Bhadravati Taluk praying for electric power line for facilitating them to take to lift irrigation;

(*b*) whether the estimate is ready?

A.—Sri A. G. RAMACHANDRA RAO (Minister for Law and Education) [On bealf of Sri K. Hanumanthaiya (Chief Minister)].

(*a*) Yes.

(*b*) Yes (Two estimates are already sanctioned by Government).

ಶ್ರೀ ಬಿ. ಮಾಧವಾಚಾರ್.—ಎರಡು ಅಂದಾಜುಗಳು ಮಂಜೂರಾಗಿವೆಯೆಂದು ಹೇಳಿದ್ದೀರಿ. ಇವು ಯಾವ ಯಾವ ಊರಿಗೆ ಸಂಬಂಧಪಟ್ಟವು?

An estimate amounting to Rs. 6,45,000 for power supply to 123 irrigation pump sets in Devarahosahalli Amarghatta on the right bank of Tungabhadra River is sanctioned on 3rd January 1953.